quickmarketreports.com

Date : 07-11-2015

# ಹರ್ಯಾನದಲ್ಲಿ ಖಾರಿಫ್ ಬೆಳೆಯ 47.94ಲಕ್ಷ ಟನ್‌ಗಳಿಗಿಂತ ಹೆಚ್ಚು ಭತ್ತ ಆವಕ

ಪ್ರಸಕ್ತ ಖಾರಿಫ್ ಸೀಜನ್‌ನಲ್ಲಿ ನವೆಂಬರ್ 5, 2015ರ ತನಕ ಹರ್ಯಾನದ ವಿವಿಧ ಧಾನ್ಯ ಮಾರುಕಟ್ಟೆಗಳಿಗೆ 47.94ಲಕ್ಷ ಟನ್‌ಗಳಿಗಿಂತ ಹೆಚ್ಚು ಭತ್ತ ಆವಕವಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯ ತನಕ 33.94ಲಕ್ಷ ಟನ್ ಭತ್ತ ಆವಕವಾಗಿತ್ತೆನ್ನಲಾಗಿದೆ.

ಇದರಲ್ಲಿ 40.25ಲಕ್ಷ ಟನ್‌ಗಳಿಗೂ ಅಧಿಕ ಭತ್ತ ಸರಕಾರಿ ಏಜೆನ್ಸಿಗಳು ಖರೀದಿ ನಡೆಸಿದ್ದು, 7.69ಲಕ್ಷ ಟನ್ ಭತ್ತ ಮಿಲ್‌ಗಳು ಮತ್ತಿತರ ಡೀಲರ್‌ಗಳು ಖರೀದಿಸಿದ್ದಾರೆಂದು ರಾಜ್ಯದ ಆಹಾರ ನಾಗರಿಕ ಪೂರೈಕಾ ಇಲಾಖೆಯ ವಕ್ತಾರರು ಹೇಳಿದ್ದಾರೆನ್ನಲಾಗಿದೆ.